## 29

# ಜನರು, ಬೀಳುವಿಕೆ, ಹಾಗೂ ನಿಯಮಗಳು

# (13:1-14)

ಇಬ್ರಿಯ ಪತ್ರಿಕೆಯು ಒಂದು ಪ್ರಬಂಧವಾಗಿ ಆರಂಭಗೊಂಡು, ಪ್ರಸಂಗವಾಗಿ ಮುಂದುವರೆದು, ಒಂದು ಪತ್ರಿಕೆಯಾಗಿ ಅಂತ್ಯಗೊಂಡಿದೆ.[1] ನೀಲ್ R. ಲೈಟ್‌ಫುಟ್‌ರವರು, ಅಧ್ಯಾಯ 13ನ್ನು "ವಿಸ್ತರಣೆಗೊಂಡ ಮುಂದಿನ ವಾಕ್ಯ" ಎಂದಿರುವರು.[2] ಶೀಘ್ರಗತಿಯ ಕ್ರಮದಲ್ಲಿ, ಅಂತಿಮವಾದ ಎಚ್ಚರಿಕೆಗಳನ್ನು ನೀಡಲಾಗಿದೆ. ಅಧ್ಯಾಯದ ಮೊದಲ ಭಾಗವನ್ನು ಈ ಪಾಠದಲ್ಲಿ, ಹಾಗೂ ಮಿಕ್ಕಾದ ಭಾಗವನ್ನು ಮುಂದಿನ ಪಾಠದಲ್ಲಿ ನೀಡಲಾಗಿದೆ.

### ಸಹಾಹಿಸುವ ಜನರು (13:1-3)

(1) *ಸಹೋದರ[3] ಸ್ನೇಹವು ನೆಲೆಯಾಗಿರಲಿ* (ವಚನ 1) ಈ ಹಿಂದೆ ದೇವ ಜನರ ಪ್ರೀತಿಯ ಕುರಿತು ಬರಹಗಾರನು ತಿಳಿಸಿರುವನು (6:10). ಅದೇ ಪ್ರೀತಿಯಲ್ಲಿ ಮುಂದಾಗ ಬೇಕೆಂದು ಮನವಿ ಮಾಡಿರುವನು (1 ಪೇತ್ರ 4:8; 2 ಯೋಹಾನ 5).

(2) *ಪರದೇಶಸ್ಥರಿಗೆ ಅತಿಥಿಸತ್ಕಾರ* (ವಚನ 2). ಅವರು ಈ ಹಿಂದೆ ಸಂದಿಸದೇ ಇದ್ದ ಕ್ರೈಸ್ತರನ್ನು ಕುರಿತು ಪರದೇಶಸ್ಥರು ಎಂದು ಹೇಳಿರಬಹುದು. ಅತಿಥಿ ಸತ್ಕಾರವು ಕ್ರೈಸ್ತರ, ನಿರ್ದಿಷ್ಟವಾದ ಚಟುವಟಿಕೆಯಾಗಿದೆ (ರೋಮಾಪುರ 12:13; 1 ಪೇತ್ರ 4:9). ಆ ದಿನಗಳಲ್ಲಿ ಅತಿಥಿ ಸತ್ಕಾರವು ಪ್ರಾಯೋಗಿಕವಾದ ಅಗತ್ಯತೆಯಾಗಿತ್ತು; ಆ ದಿನದ ಅತಿಥಿ ಗೃಹಗಳು, ಮೆಚ್ಚುವಂಥದ್ದಾಗಿರದಿಲ್ಲ, ಮತ್ತು ಅನೇಕ ಕ್ರೈಸ್ತರು ಬಡವರಾಗಿದ್ದರು. ಅತಿಥಿ ಸತ್ಕಾರದ ನಿಮಿತ್ತ ಅನೇಕ ಆಶೀರ್ವಾದಗಳು ಉಂಟಾಗುತ್ತಿದ್ದವು.

(3) *ಹಿಂಸೆಗೊಳಗಾದವರಿಗೆ ಅನುಕಂಪ* (ವಚನ 3). ಕ್ರೈಸ್ತರು ತಮ್ಮ ವಿಶ್ವಾಸದ ನಿಮಿತ್ತ ಸೆರೆ ಮನೆಗೊಳಗಾಗಿ, ಹೆಚ್ಚಿನ ಕಷ್ಟವನ್ನು ಅನುಭವಿಸಿದ್ದರು. ಈ ಓದುಗರು ಸೆರೆಯಾದವರಿಗೆ ಕರುಣೆಯನ್ನು ತೋರಿದ್ದರು (10:34). ಈಗ ಸೆರೆಯವರ ಸಂಗಡ ನೀವೂ ಜೊತೆಸೆರೆಯುವ ರಾಗಿ ಭಾವಿಸಿಕೊಂಡು ಅವರನ್ನು ಜ್ಞಾಪಕಮಾಡಿಕೊಳ್ಳಿರಿ. ಕರುಣೆಯು, ಕಾರ್ಯವನ್ನು ತೋರುತ್ತದೆ (ಮತ್ತಾಯ 25:36; ಯಾಕೋಬ 2:15, 16).

### ಬೀಳುವಿಕೆಯ ತಡೆಗಟ್ಟುವಿಕೆ (13:4-6)[4]

(1) *ಜಾರತ್ವ ಹಾಗೂ ವ್ಯಭಿಚಾರ* (ವಚನ 4). ಮದುವೆಯಾದವರು, ಇತರೆ ಮದುವೆ ಯಾದವರ ಸಂಗಡ ಇಟ್ಟುಕೊಂಡಿರುವ ಅನೈತಿಕ ಸಂಬಂಧಕ್ಕೆ ವ್ಯಭಿಚಾರ ಎನ್ನುವರು. ಇತರೆ ವಿಧವಾದ ಅನೈತಿಕ ಸಂಬಂಧ ಅಂದರೆ (ವಾಕ್ಯದ ಪ್ರಕಾರ ಮದುವೆಯಾದವರ ನಡುವಿನ ಅನೈತಿಕ ಸಂಬಂಧ) ಜಾರತ್ವವಾಗಿದೆ. *ಮದುವೆಯ* ಸಂಬಂಧದ ಲೈಂಗಿಕತೆಯನ್ನು, ಮಾನ್ಯವಾದದ್ದೆಂದು ಯೋಗ್ಯವಾದದ್ದು ಎಂದು ಹೇಳಲಾಗಿದೆ (KJV) ಮದುವೆಯ ಹೊರಗೆ ಇರುವ ಲೈಂಗೀಕತೆಯನ್ನು ಅಯೋಗ್ಯ ಹಾಗೂ ಅವಮಾನಕರ ಎಂದು ಹೇಳಲಾಗಿದೆ. ಅನ್ಯ ದೇವರುಗಳನ್ನು ಪೂಜಿಸುತ್ತಲೂ, ಲೈಂಗಿಕ ಚಟುವಟಿಕೆಗಳು ಅಧಿಕವಾಗಿದದ್ದರಿಂದಲೂ, ಈ ಉಪದೇಶವು ಅತಿ ಅವಶ್ಯವಾಗಿತ್ತು. ಈ ದಿನಗಳಲ್ಲೂ ಈ ಬೋಧನೆಯ ಅಗತ್ಯತೆಯಿದೆ.

(2) *ದ್ರವ್ಯಾಶೆ, ಹಾಗೂ ಅತೃಪ್ತತೆ* (ವಚನಗಳು 5, 6). ದ್ರವ್ಯಾಶೆಯಿಲ್ಲದವರಾಗಿರ್ರಿ ತೃಪ್ತ ರಾಗಿರಿ. ದೇವರು ನಮ್ಮೊಂದಿಗಿರುವನು. ಆತನು ನಮ್ಮೊಂದಿಗಿರುವದರಿಂದ ಭಯಪಡವ

ಅಗತ್ಯವಿಲ್ಲ. ನಂಬಿಗಸ್ಥರಾದ ಓದುಗರಿಗೆ ಈ ಅಗತ್ಯವಿಲ್ಲ. ನಂಬಿಗಸ್ತರಾದ ಓದುಗರಿಗೆ ಈ ಅಗತ್ಯತೆಯಿತ್ತು. ಈ ಸತ್ಯವು ನಮಗೆ ಒಂದು ಅರ್ಥವನ್ನು ನೀಡುತ್ತದೆ. ನಾವು ತೃಪ್ತರಾಗಿರ ಬೇಕಷ್ಟೆ,

## ಕೇಳುವ ನಿಯಮ (13:7-14)

(1) *ನಂಬಿಗಸ್ತರಾದ ಉಪದೇಶಕರನ್ನು ಅನುಸರಿಸರಿ* (ವಚನ 7). ದೇವರ ವಾಕ್ಯವನ್ನು ತಿಳಿಸಿದವರನ್ನು ಮೂಲ ಓದುಗರು ನೆನಪು ಮಾಡಬೇಕಿತ್ತು (ನೋಡಿರಿ 2:1-4). ನಂತರದ ಅವರ ಭಕ್ತಿಯ ಜೀವನವನ್ನು ಅನುಸರಿಸಬೇಕಿತ್ತು. ಉತ್ತಮ ನಿದರ್ಶನಗಳು ಸಾಧ್ಯತೆಯಿದೆ. ಈ ಕ್ರೈಸ್ತರು ಯಥಾರ್ಥರಾಗಿದ್ದರು. ಮುಂದಾಗಿ ಹೋದವರ ನಿದರ್ಶನವು ಇದನ್ನು ನಿಖರಪಡಿಸಿತ್ತು.

(2) *ಅನ್ಯೋಪದೇಶಗಳ ಸೆಳವಿಗೆ ಸಿಕ್ಕಬೇಡಿರಿ* (ವಚನಗಳು 8, 9). ಈ ಹಿಂದೆ ಅವರು ಯಾರಿಂದ ವಾಕ್ಯಗಳನ್ನು ಹೊಂದಿದ್ದರೋ, ಆ ಬೋಧನೆಗಳು ಬದಲಾಗಿರಲಿಲ್ಲ, ಏಕೆಂದರೆ ಅದನ್ನು ನೀಡಿದ ಯೇಸು ಬದಲಾಗಿರಲಿಲ್ಲ (ವಚನ 8). ಆದ್ದರಿಂದ ಅವರು ಈ ಉಪದೇಶಗಳನ್ನು ಪಾಲಿಸಬೇಕಿತ್ತು. "ತಪ್ಪು ಬೋಧನೆಯ ಸೆಳವಿಗೆ ಸಿಲುಕಬಾರದಿತ್ತು" (ವಚನ 9ಎ). ಈ ಅನ್ಯೋಪದೇಶಗಳನ್ನು ಕುರಿತು ಆ ಓದುಗರು ಅರಿತಿದ್ದರು. ಆಹಾರದ ಕುರಿತು ಹೇಳಿ ರುವದರಿಂದ, ಈ ಬೋಧನೆಯು ಹಳೇ ಒಡಂಬಡಿಕೆಯ ನಿಯಮಕ್ಕೆ ಸಂಬಂಧಪಟ್ಟಿತ್ತು. ಅನ್ಯೋಪದೇಶವು ಏನೇ ಆಗಿದ್ದರು. ಅದರಿಂದ ಅವರಿಗೆ ಯಾವುದೇ ಆಶೀರ್ವಾದವು ದೊರೆಯುತ್ತಿರಲಿಲ್ಲ. ಹೊಸ ಒಡಂಬಡಿಕೆಯ ಕೃಪೆಯಿಂದ ಮಾತ್ರ ಅವರಿಗೆ ಆಶೀರ್ವಾದ ಲಭ್ಯವಿತ್ತು. ಈಗಲೂ ಸಹ.

ವಚನ 8 ರಲ್ಲಿ, ಈ ದಿನಕ್ಕೆ ಸಂಬಂಧ ಪಟ್ಟ ಗುಣಗಳಿವೆ. "ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳಬೇಕು" (ಯೂದ 3). ಯೇಸು ಮಹತ್ವವುಳ್ಳ ವ್ಯಕ್ತಿಯಾಗಿರುವದರಿಂದ, ಈ ವಾಕ್ಯಗಳು ನಮಗೂ ಸಂಬಂಧಪಡುತ್ತವೆ. ಆ ಮಹಾಯಾಜಕನೇ ನಮಗೆ ಸಹಾಯವಾಗಿದ್ದಾನೆ. ಆದ್ದರಿಂದ ನಾವುಗಳು ಸಹ ಅನ್ಯೋಪ ದೇಶದ ಸೆಳವಿಗೆ ಸಿಕ್ಕಿಕೊಳ್ಳಬಾರದು.

(3) *ಯೇಸುವನ್ನು ಅನುಸರಿಸಿರಿ* (ವಚನಗಳು 10-14). ಕ್ರೈಸ್ತತ್ವಕ್ಕೂ ಹಾಗೂ ಯೆಹೂದ್ಯ ಮತಕ್ಕೂ ನಡುವೆ ಇರುವ ವ್ಯತ್ಯಾಸಗಳ ಕುರಿತು ಹಳೆ ಒಡಂಬಡಿಕೆಯ ಉಲ್ಲೇಖಗಳನ್ನು ಈ ವಾಕ್ಯಗಳ ಅಂತ್ಯಭಾಗದಲ್ಲಿ ನೀಡಲಾಗಿದೆ.

*ಒಂದು ಯಜ್ಞವೇದಿ,* ಹಳೆ ಒಡಂಬಡಿಕೆಯವರು ಹೊಂದದೆ ಇರುವ "ಯಜ್ಞವಿದೆ" (ವಚನ 10). ಅದು ಯೇಸು ಶಿಲುಬೆಯಲ್ಲಿ ಸುರಿಸಿದ ರಕ್ತವಾಗಿದೆ.

*ಒಂದು ಪಾಳೆಯ.* ಯೇಸುವಿನ ಯಜ್ಞ "*ಪಾಳೆಯದ* ಹೊರಗೆ" ಮಾಡಲ್ಪಟ್ಟಿತು (ವಚನಗಳು 11, 13; ನೋಡಿರಿ ವಚನ 12). ಇಸ್ರಾಯೇಲ್ಯರ ಅರಣ್ಯ ಪ್ರಯಾಣದ ದಿವಸಗಳಲ್ಲಿ ಗುಡಾರವನ್ನು ಹಾಕಿ "ಪಾಳೆಯವನ್ನು" ನಿರ್ಮಿಸಿಕೊಳ್ಳುತ್ತಿದ್ದರು. ಯಜ್ಞಗಳನ್ನು ಸರ್ಮಿಸುವಾಗ ಜನರು "ಪಾಳೆಯದ ಹೊರಗೆ ಹೋಗುತ್ತಿದ್ದರು" ಅದೇ ರೀತಿಯಲ್ಲಿ ಜನರು "ಆತನ (ಯೇಸುವಿನ) ಬಳಿಗೆ ಪಾಳೆಯದ ಆಚೆ" ಹೋದರು (ವಚನ 13ಎ). ಪಾಳೆಯದ ಹೊರಗೆ ಅಂದರೆ, ಯೆಹೂದ್ಯರ ಕಟ್ಟುಪಾಡುಗಳನ್ನು ತೊರೆದು ಹೋಗುವದು ಎಂಬ ಅರ್ಥ. ಯೆಹೂದ್ಯ ಕ್ರೈಸ್ತರು, ಯೆಹೂದ್ಯರ ಸಕಲವಿಧವಾದ ಕಟ್ಟುಪಾಡುಗಳನ್ನು ಬಿಟ್ಟು ಬಿಡಬೇಕೆಂದು ಎಚ್ಚರಿಕೆಯನ್ನು ಹೊಂದಿದ್ದರು. ಅವರು ಯೇಸುವನ್ನು ಹಿಂಬಾಲಿಸಿ ಶ್ರಮೆಯನ್ನು ಅನುಭವಿಸಲು ಅವರಿಗಾಗಿ ಕಾಯದಿರುವ (ವಚನ 13ಬಿ). ಶಾಶ್ವತವಾದ "ಪಟ್ಟಣವನ್ನು" ಹೊಂದಲು ಮುಂದಾಗಬೇಕಿತ್ತು (ವಚನ 14).

ಒಂದು *ಪಟ್ಟಣ.* ನಾವು ಪ್ರವಾಸಿಗಳಾಗಿದ್ದೇವೆ ಎಂದು ಹೇಳಲಾಗಿದೆ (13:14; ನೋಡಿರಿ

11:8-16). ನನ್ನ ಉಪಾಧ್ಯಾಯರಾದ ನೀಲ್ R. ಲೈಟ್ ಫುಟ್‌ರವರು,[5] "ವಚನ 14ನ್ನು ಬಾಯಿ ಪಾಠಮಾಡಿರಿ ಎಂದು ಹೇಳಿದರು. ಅದನ್ನು ಗೋಡೆಗಳ ಮೇಲೆ ಬರೆದಿಡಿ ಎಂದು ಸಹ ಹೇಳಿದರು." ಆತನು ಹೀಗೆ ಹೇಳಿದನು, "ಈ ವಚನವನ್ನು ನಾವು ನಿಜವಾಗಿ ನಂಬಿದರೆ, ಏನು ವ್ಯತ್ಯಾಸವನ್ನು ತರುತ್ತದೆ! ನಮ್ಮ ಜೀವನ ಕ್ರಮ ಶ್ರೇಷ್ಟವಾಗುತ್ತದೆ ಎಂದು ಸಹ ತಿಳಿಸಿದರು. ತಾತ್ಕಾಲಿಕ ಗೊಂದಲುಗಳು ಶಮನಗೊಳ್ಳಲು ಸಾಧ್ಯವಿದೆ." ಮತ್ತೇ ಆತನು ಹೀಗೆ ಹೇಳಿದನು, " 'ನಾವು ಬರಲಿರುವ ಒಂದು ಪಟ್ಟಣವನ್ನು ಹುಡುಕುತಿದ್ದೇವೆ' ಎಂದು ಈ ವಚನವು ತಿಳಿಸುತ್ತದೆ. ನೀವು ನಾನು ಯಾವ ಪಟ್ಟಣವನ್ನು ಹುಡುಕುತ್ತಿರುವೆವು."

---

ಟಿಪ್ಪಣಿಗಳು

[1]Neil R. Lightfoot, *Jesus Christ Today* (Grand Rapids, Mich.: Baker Book House, 1976), 43. [2]Ibid, 245. [3]ಸ್ತ್ರೀ ಪುರುಷರನ್ನು ಕುರಿತು "ಸಹೋದರರು" ಎನ್ನಲಾಗಿದೆ. [4]ಅಡ್ಡಿಮಾಡುವ ಜೀಳುವಿಕೆ. [5]Neil R. Lightfoot, ACU extension class on Hebrews taught in Fort Worth, Texas, 26 October 1985.